# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕೋವಿಡ್-19 ರ ಹರಡುವಿಕೆಯನ್ನು ನಿರ್ಬಂಧಿಸಲು ಕ್ರಮ ಕೈಗೊಂಡು ಚಲನಚಿತ್ರ ಪ್ರದರ್ಶನ ನಡೆಸುವ ಮಾದರಿ ಕಾರ್ಯ ನಿರ್ವಹಣಾ ಪ್ರಕ್ರಿಯೆ ಕಾರ್ಯ ವಿಧಾನ (S.O.P.) ಮಾರ್ಗಸೂಚಿಗಳನ್ನು ಹೊರಡಿಸುವ ಬಗ್ಗೆ.

ಓದಲಾಗಿದೆ: ಆಯುಕ್ತರು, ವಾಸಾಸಂ ಇಲಾಖೆ ಇವರ ಇ ಕಚೇರಿಯ ಏಕ ಕಡತದ ಪತ್ರ ಸಂ: DIPR-17019/15/2020, ದಿ:08.10.2020.

-@@@-

**ಪ್ರಸ್ತಾವನೆ:**

ಕಂದಾಯ ಇಲಾಖೆಯ ಸರ್ಕಾರದ ಆದೇಶ ಸಂ: ಕಂಇ/158/ಟಿ.ಎನ್.ಆರ್./20 ದಿ: 01-10-2020ರಲ್ಲಿ ಕಂಟೈನ್ಮೆಂಟ್ ವಲಯಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಮಾತ್ರವೇ ಸಿನಿಮಾ ಮಂದಿರಗಳು/ರಂಗಮಂದಿರಗಳು/ಮಲ್ಟಿಪ್ಲೆಕ್ಸ್ ಗಳನ್ನು ದಿ: 15-10-2020 ರಿಂದ ಜಾರಿಗೆ ಬರುವಂತೆ ಅವುಗಳ ಒಟ್ಟು ಆಸನ ಸಾಮರ್ಥ್ಯದ ಶೇ. 50 ರಷ್ಟು ಮಂದಿಗೆ ಮಾತ್ರ ಅವಕಾಶ ನೀಡಿ ತೆರೆಯಲು ಅನುಮತಿಸಲಾಗುವುದು. ಇದಕ್ಕಾಗಿ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಭಾರತ ಸರ್ಕಾರದ ಮಾಹಿತಿ ಮತ್ತು ಪ್ರಚಾರ ಮಂತ್ರಾಲಯಗಳು ಮಾದರಿ ಕಾರ್ಯನಿರ್ವಹಣಾ ಪ್ರಕ್ರಿಯೆ (S.O.P.) ಯನ್ನು ಹೊರಡಿಸಲಿವೆ ಎಂದು ನಿರ್ದೇಶಿಸಲಾಗಿದೆ. ಅದರಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಕೋವಿಡ್ -19 ರ ಹರಡುವಿಕೆಯನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಚಲನಚಿತ್ರ ಪ್ರದರ್ಶನ ನಡೆಸಲು ಅನುಸರಿಸಬೇಕಾದ S.O.P. (ಕಾರ್ಯ ನಿರ್ವಹಣಾ) ಯನ್ನು ಅನುಬಂಧ-1 ಮತ್ತು 2 ರಲ್ಲಿ ಸಿದ್ಧಪಡಿಸಿ ಸಲ್ಲಿಸುತ್ತಾ, S.O.P.ಯನ್ನು ಅನುಮೋದಿಸಿ ಆದೇಶ ಹೊರಡಿಸುವಂತೆ ಮೇಲೆ ಓದಲಾದ ಇ-ಕಚೇರಿಯ ಏಕಕಡತದ ಪತ್ರದಲ್ಲಿ ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ:KCI-PIF/27/2020, ಬೆಂಗಳೂರು, ದಿನಾಂಕ: 14-10-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಕಂಟೈನ್ಮೆಂಟ್ ವಲಯಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಮಾತ್ರವೇ ಸಿನಿಮಾ ಮಂದಿರಗಳು/ರಂಗಮಂದಿರಗಳು/ಮಲ್ಟಿಪ್ಲೆಕ್ಸ್ ಗಳನ್ನು ದಿ: 15-10-2020 ರಿಂದ ಜಾರಿಗೆ ಬರುವಂತೆ ಅವುಗಳ ಒಟ್ಟು ಆಸನ ಸಾಮರ್ಥ್ಯದ ಶೇ. 50 ರಷ್ಟು ಮಂದಿಗೆ ಮಾತ್ರ ಅವಕಾಶ ನೀಡಿ ತೆರೆಯಲು, ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಕೋವಿಡ್ -19 ರ ಹರಡುವಿಕೆಯನ್ನು ತಡೆಗಟ್ಟುವ ಹಿನ್ನೆಲೆಯಲ್ಲಿ ಚಲನಚಿತ್ರ ಪ್ರದರ್ಶನ ನಡೆಸಲು ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧ-1 ಮತ್ತು 2 ರಲ್ಲಿರುವಂತೆ ಕಾರ್ಯ ವಿಧಾನ (S.O.P.) ಗಳನ್ನು ಅನುಸರಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

ಜಯಶ್ರೀ. ಎಸ್. ಎನ್.
(ಜಯಶ್ರೀ.ಎಸ್.ಎನ್) 14/10/2020
ಸರ್ಕಾರದ ಅಧೀನ ಕಾರ್ಯದರ್ಶಿ.
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ.
(ವಾರ್ತಾ ಶಾಖೆ)

ಇವರಿಗೆ.

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ, ಬೆಂಗಳೂರು.
2. ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು (ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮುಖಾಂತರ)
4. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

ಪ್ರತಿ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ವಿಪತ್ತು ನಿರ್ವಹಣಾ ಪ್ರಾಧಿಕಾರದ ಕಾರ್ಯಕಾರಿ ಸಮಿತಿ ಅಧ್ಯಕ್ಷರು ಇವರ ಆಪ್ತ ಕಾರ್ಯದರ್ಶಿ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕಂದಾಯ ಇಲಾಖೆ(ವಿಪತ್ತು ನಿರ್ವಹಣೆ), ಇವರ ಆಪ್ತ ಕಾರ್ಯದರ್ಶಿ.

Scanned with CamScanner

# ಸರ್ಕಾರದ ಆದೇಶ ಸಂಖ್ಯೆ: KCI-PIF/27/2020, ದಿ:14.10.2020

## ಅನುಬಂಧ – 1

## ಕೋವಿಡ್–19 ಹರಡುವಿಕೆ ತಡೆಯುವ ಕ್ರಮಗಳೊಂದಿಗೆ ಚಲನಚಿತ್ರ ಪ್ರದರ್ಶನಕ್ಕಾಗಿ ಮಾದರಿ ಕಾರ್ಯನಿರ್ವಹಣಾ ಪ್ರಕ್ರಿಯೆ (ಎಸ್‌ಒಪಿ)

**1. ಹಿನ್ನೆಲೆ**

ಭಾರತದಲ್ಲಿ ಕೋವಿಡ್–19ರ ವ್ಯಾಪಕ ಹರಡುವಿಕೆಯನ್ನು ಗಮನದಲ್ಲಿಟ್ಟುಕೊಂಡು, ಚಲನಚಿತ್ರ ಪ್ರದರ್ಶನ ಚಟುವಟಿಕೆಯಲ್ಲಿ ಒಳಗೊಳ್ಳುವಂತಹ ವಿವಿಧ ಪಾಲುದಾರರುಗಳು ಸೋಂಕು ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಬಹಳ ಮುಖ್ಯ. ಚಲನಚಿತ್ರ ಮಂದಿರಗಳು/ ಥಿಯೇಟರ್/ ಮಲ್ಟಿಪ್ಲೆಕ್ಸ್‌ಗಳನ್ನು 15ನೇ ಅಕ್ಟೋಬರ್ 2020 ರಿಂದ ಪ್ರಾರಂಭಿಸಲು ಕೇಂದ್ರ ಗೃಹ ಮಂತ್ರಾಲಯ ಅನುಮತಿ ನೀಡಿದ್ದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯವು ಮಾದರಿ ಕಾರ್ಯನಿರ್ವಹಣಾ ಪ್ರಕ್ರಿಯೆ (ಎಸ್‌ಒಪಿ) ಹೊರಡಿಸಿದೆ.

ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ಪತ್ರಸಂಖ್ಯೆ ಕಂಇ/158/ಟಿ.ಎನ್.ಆರ್./2020 ದಿ.1–10–2020ರಲ್ಲಿ ಕಂಟೈನ್‌ಮೆಂಟ್ ವಲಯಗಳನ್ನು ಹೊರತುಪಡಿಸಿದ ಪ್ರದೇಶಗಳಲ್ಲಿ ಮಾತ್ರ ಸಿನಿಮಾ ಮಂದಿರಗಳು / ರಂಗಮಂದಿರಗಳು / ಮಲ್ಟಿಫೆಕ್ಸ್‌ಗಳನ್ನು ದಿ. 15.10.2020ರಿಂದ ಜಾರಿಗೆ ಬರುವಂತೆ ಅನುಮತಿಸಲಾಗುವುದು. ಈ ಸಂಬಂಧ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮಾದರಿ ಕಾರ್ಯನಿರ್ವಹಣಾ ಪ್ರಕ್ರಿಯೆಗಳನ್ನು (ಎಸ್‌ಒಪಿ) ಹೊರಡಿಸಲಿದೆ ಎಂದು ಉಲ್ಲೇಖಿಸಲಾಗಿದೆ. ಈ ಹಿನ್ನೆಲೆಯಲ್ಲಿ ವಾರ್ತಾ ಇಲಾಖೆಯು ಎಸ್‌ಒಪಿಯನ್ನು ಹೊರಡಿಸಿದೆ.

**2. ವ್ಯಾಪ್ತಿ**

**2.1** ಈ ದಸ್ತಾವೇಜು ಚಲನಚಿತ್ರಗಳನ್ನು ಪ್ರದರ್ಶಿಸುವ ಸಂದರ್ಭದಲ್ಲಿ ಕೋವಿಡ್–19ರ ಹರಡುವಿಕೆಯನ್ನು ತಡೆಗಟ್ಟುವುದನ್ನು ಖಾತ್ರಿ ಪಡಿಸುವ ಉದ್ದೇಶದಿಂದ ನಿರ್ದಿಷ್ಟ ಕ್ರಮಗಳೊಂದಿಗೆ ಹೆಚ್ಚುವರಿಯಾಗಿ ಕೈಗೊಳ್ಳಬೇಕಾದ ವಿವಿಧ ಸಾಮಾನ್ಯ ಎಚ್ಚರಿಕೆಯ ಕ್ರಮಗಳ ಕುರಿತಂತೆ ಸ್ಥೂಲವಾಗಿ ಮಾದರಿ ಕಾರ್ಯನಿರ್ವಹಣಾ ಪ್ರಕ್ರಿಯೆ (ಎಸ್‌ಒಪಿ) ಯನ್ನು ವಿವರಿಸುತ್ತದೆ.

**2.2** ಕಂಟೈನ್‌ಮೆಂಟ್ ಪ್ರದೇಶಗಳಲ್ಲಿ ಚಲನಚಿತ್ರ ಪ್ರದರ್ಶನಕ್ಕೆ ಅವಕಾಶ ಇರುವುದಿಲ್ಲ.

**2.3** ಚಲನಚಿತ್ರ ಮಂದಿರಗಳು/ಮಲ್ಟಿಪ್ಲೆಕ್ಸ್‌ಗಳ ಮೂಲಕ ಚಲನಚಿತ್ರ ಪ್ರದರ್ಶನ ಚಟುವಟಿಕೆಗಳು ಗೃಹ ಇಲಾಖೆ, ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸೇರಿದಂತೆ ಇನ್ನಿತರ ಇಲಾಖೆಗಳು ಹೊರಡಿಸಿರುವ ಮತ್ತು ಜಾರಿಯಲ್ಲಿರುವ ಮಾರ್ಗಸೂಚಿಗಳನ್ವಯ ನಿಯಂತ್ರಿಸಲ್ಪಡತಕ್ಕದ್ದು.

**3. ಚಲನಚಿತ್ರ ಪ್ರದರ್ಶನಕ್ಕೆ ಸಂಬಂಧಿಸಿದಂತಹ ಎಸ್‌ಒಪಿ**

**3.1 ಸಾಮಾನ್ಯ ಮಾರ್ಗಸೂಚಿಗಳು**

ಈ ಸಾಮಾನ್ಯ ಕ್ರಮಗಳು ಕೋವಿಡ್–19ರ ವ್ಯಾಪಕ ಹರಡುವಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಅನುಸರಿಸಬೇಕಾದ ಸಾರ್ವಜನಿಕ ಆರೋಗ್ಯ ಕ್ರಮಗಳನ್ನು ಒಳಗೊಳ್ಳುತ್ತದೆ.

ಅವುಗಳು ಹೀಗಿವೆ:

I. ಆಡಿಟೋರಿಯಂನ ಹೊರಭಾಗದಲ್ಲಿ, ಸಾಮಾನ್ಯ ಪ್ರದೇಶಗಳಲ್ಲಿ ಮತ್ತು ಕಾಯುವ ಸ್ಥಳಗಳಲ್ಲಿ ಕನಿಷ್ಠ 6 ಅಡಿಗಳ ದೈಹಿಕ ಅಂತರವನ್ನು ಕಾಪಾಡಿಕೊಳ್ಳತಕ್ಕದ್ದು.

Scanned with CamScanner

II. ಎಲ್ಲಾ ಸಂದರ್ಭಗಳಲ್ಲಿಯೂ ಸಹ ಮುಖ ಗವುಸು / ಮಾಸ್ಕಗಳನ್ನು ಧರಿಸುವುದು ಕಡ್ಡಾಯ.

III. ಕೈ ಸ್ವಚ್ಛಗೊಳಿಸುವ ಹ್ಯಾಂಡ್ ಸ್ಯಾನಿಟೈಸರ್ ಪ್ರವೇಶ ಮತ್ತು ನಿರ್ಗಮನದ ಸ್ಥಳಗಳಲ್ಲಿ ಹಾಗೂ ಆವರಣದ ಸಾಮಾನ್ಯ ಪ್ರದೇಶಗಳಲ್ಲಿ ಲಭ್ಯವಿರತಕ್ಕದ್ದು. ಮುಟ್ಟದೇ ಬಳಸುವಂಥ (ಟಚ್ ಫ್ರೀ) ಮಾದರಿಯದ್ದಾದರೆ ಹೆಚ್ಚು ಸೂಕ್ತ.

IV. ಕೆಮ್ಮುವಾಗ ಮತ್ತು ಸೀನುವಾಗ ನಿಗದಿಪಡಿಸಿರುವ ಶಿಷ್ಟಾಚಾರಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಯಾವುದೇ ವ್ಯಕ್ತಿಯು ಕೆಮ್ಮುವಾಗ / ಸೀನುವಾಗ ಬಾಯಿ ಮತ್ತು ಮೂಗುಗಳನ್ನು ಕರವಸ್ತ್ರ / ಟಿಶ್ಯೂ ಕಾಗದ/ ಮೊಣಕೈ ಮಡಚಿಕೊಂಡು ದೂರಕ್ಕೆ ಸಿಡಿಯದಂತೆ ನೋಡಿಕೊಳ್ಳುವಂಥ ಶಿಷ್ಟಾಚಾರವನ್ನು ಪಾಲಿಸಬೇಕು. ಹಾಗೆಯೇ, ಬಳಸಿದ ಟಿಶ್ಯೂಗಳನ್ನು ಸಹ ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡತಕ್ಕದ್ದು.

V. ಎಲ್ಲರೂ ಸಹ ಸ್ವಯಂ ಆರೋಗ್ಯ ತಪಾಸಣೆಗೆ ಒಳಪಡತಕ್ಕದ್ದು ಮತ್ತು ಯಾವುದೇ ರೋಗಲಕ್ಷಣಗಳಿದ್ದಲ್ಲಿ ಅದನ್ನು ಕೂಡಲೇ ರಾಜ್ಯ ಮತ್ತು ಜಿಲ್ಲಾ ಸಹಾಯವಾಣಿಗಳಿಗೆ ವರದಿ ಮಾಡತಕ್ಕದ್ದು.

VI. ಉಗುಳುವುದನ್ನು ಕಡ್ಡಾಯವಾಗಿ ನಿರ್ಬಂಧಿಸತಕ್ಕದ್ದು

VII. ಆರೋಗ್ಯ ಸೇತು ಆಪ್ ಅನ್ನು ಇನ್‌ಸ್ಟಾಲ್ ಮಾಡಿಕೊಂಡು ಎಲ್ಲರಿಗೂ ಬಳಸಲು ಸಲಹೆ ನೀಡತಕ್ಕದ್ದು.

### 3.2 ಪ್ರವೇಶ ಮತ್ತು ನಿರ್ಗಮನ ದ್ವಾರಗಳು

a. ಪ್ರವೇಶದ್ವಾರದಲ್ಲಿ ಪ್ರೇಕ್ಷಕರು / ಸಿಬ್ಬಂದಿ ವರ್ಗಕ್ಕೆ ಥರ್ಮಲ್ ಸ್ಕ್ರೀನಿಂಗ್ ಅನ್ನು ಕಡ್ಡಾಯವಾಗಿ ಮಾಡತಕ್ಕದ್ದು. ಯಾವುದೇ ರೋಗ ಲಕ್ಷಣ ರಹಿತವಾಗಿರುವ ವ್ಯಕ್ತಿಗಳಿಗೆ ಮಾತ್ರವೇ ಪ್ರವೇಶ ನೀಡತಕ್ಕದ್ದು.

b. ಎಲ್ಲಾ ಪ್ರವೇಶ ದ್ವಾರಗಳಲ್ಲಿಯೂ ಮತ್ತು ಕಾರ್ಯ ಚಟುವಟಿಕೆಯ ಪ್ರದೇಶಗಳಲ್ಲಿಯೂ ಹ್ಯಾಂಡ್ ಸ್ಯಾನಿಟೈಸರ್ ಲಭ್ಯವಿರತಕ್ಕದ್ದು.

c. ಸಭಾಂಗಣ ಮತ್ತು ಚಲನಚಿತ್ರ ಮಂದಿರ ಪ್ರದೇಶಗಳಲ್ಲಿ ಪ್ರೇಕ್ಷಕರ ಪ್ರವೇಶ ಮತ್ತು ನಿರ್ಗಮನಕ್ಕಾಗಿ ಇರುವ ಸರತಿ ಸಾಲಿನಲ್ಲಿ ದೈಹಿಕ ಅಂತರಕ್ಕಾಗಿ ಸ್ಥಳಗಳ ಅಂತರ ಗುರುತಿಸುವ ಗುರುತುಗಳನ್ನು ಹಾಕಿರತಕ್ಕದ್ದು.

d. ಜನದಟ್ಟಣೆಯನ್ನು ನಿರ್ಬಂಧಿಸುವ ದೃಷ್ಟಿಯಿಂದ ನಿರ್ಗಮನ ದ್ವಾರದಲ್ಲಿ ಸಾಲುವಾರು ನಿರ್ಗಮನವನ್ನು ಅನುಸರಿಸತಕ್ಕದ್ದು.

e. ಏಕಪರದೆಯ ಚಲನಚಿತ್ರಮಂದಿರಗಳಲ್ಲಿ ಹಾಗೂ ಮಲ್ಟಿಪ್ಲೆಕ್ಸ್‌ಗಳಲ್ಲಿ ವಿವಿಧ ಪರದೆಗಳಲ್ಲಿ ಒಂದು ಪ್ರದರ್ಶನ ಹಾಗೂ ಮತ್ತೊಂದು ಪ್ರದರ್ಶನದ ನಡುವೆ ಸಾಕಷ್ಟು ಸಮಯದ ಅಂತರವಿರತಕ್ಕದ್ದು ಮತ್ತು ಪ್ರೇಕ್ಷಕರು ಸಾಲುವಾರು ಪ್ರವೇಶ ಮತ್ತು ನಿರ್ಗಮನವನ್ನು ಖಾತ್ರಿ ಪಡಿಸತಕ್ಕದ್ದು.

### 3.3 ಆಸನ ವ್ಯವಸ್ಥೆ

a. ಯಾವುದೇ ಚಲನಚಿತ್ರ ಮಂದಿರ / ಥಿಯೇಟರ್ / ಮಲ್ಟಿಪ್ಲೆಕ್ಸ್‌ನಲ್ಲಿರುವ ಒಟ್ಟು ಆಸನ ಸಾಮರ್ಥ್ಯದ ಶೇ. 50 ಕ್ಕಿಂತ ಹೆಚ್ಚಿನ ಸಂಖ್ಯೆಯ ಪ್ರೇಕ್ಷಕರಿಗೆ ಒಳಗೆ ಪ್ರವೇಶ ನೀಡತಕ್ಕದ್ದಲ್ಲ.

b. ಚಲನಚಿತ್ರ ಮಂದಿರಗಳು/ಥಿಯೇಟರ್/ಮಲ್ಟಿಪ್ಲೆಕ್ಸ್‌ಗಳಲ್ಲಿ ಆಸನ ವ್ಯವಸ್ಥೆಯು ಸಾಕಷ್ಟು ದೈಹಿಕ ಅಂತರವನ್ನು ಕಾಪಾಡಿಕೊಳ್ಳುವಂತೆ ಇರತಕ್ಕದ್ದು. ಮಾದರಿ ಆಸನ ವ್ಯವಸ್ಥೆಯ ಚಿತ್ರವನ್ನು ಅಡಕ-I ರಲ್ಲಿ ನೀಡಿದೆ.

c. ಕುಳಿತುಕೊಳ್ಳಲು ಅವಕಾಶವಿರದ ಆಸನಗಳನ್ನು ಟಿಕೆಟ್ ಖರೀದಿಯ ಸಮಯದಲ್ಲಿಯೇ ಗುರುತು ಮಾಡಿ ತೋರಿಸಬೇಕು. (ಆನ್‌ಲೈನ್ ಬುಕ್ಕಿಂಗ್ ಹಾಗೂ ಚಿತ್ರಮಂದಿರದ ಕೌಂಟರ್ / ಬಾಕ್ಸ್ ಆಫೀಸ್‌ನಲ್ಲಿ ಟಿಕೆಟ್ ಖರೀದಿ ಎರಡೂ ಸಂದರ್ಭಗಳಲ್ಲಿ)

**ಟಿಪ್ಪಣಿ:** ಚಲನಚಿತ್ರ ಮಂದಿರಗಳು/ಮಲ್ಟಿಪ್ಲೆಕ್ಸ್‌ಗಳಲ್ಲಿ 'ಕುಳಿತುಕೊಳ್ಳಬಾರದ ಆಸನಗಳಿಗೆ ಟೇಪ್ ಅಂಟಿಸಿ ಇಲ್ಲವೆ ಫ್ಲೋರೊಸೆಂಟ್ ಮಾರ್ಕರ್‌ನಿಂದ ಗುರುತು ಮಾಡತಕ್ಕದ್ದು. ಪ್ರೇಕ್ಷಕರು ಗುರುತು ಮಾಡಿದ ಈ ಆಸನಗಳಲ್ಲಿ ಕುಳಿತುಕೊಳ್ಳದಂತೆ ನೋಡಿಕೊಳ್ಳತಕ್ಕದ್ದು. ಎಲ್ಲಾ ಸಮಯದಲ್ಲಿಯೂ ದೈಹಿಕ ಅಂತರವನ್ನು ಖಾತ್ರಿ ಪಡಿಸತಕ್ಕದ್ದು.

### 3.4. ದೈಹಿಕ ಅಂತರದ ಸೂತ್ರಗಳು

Scanned with CamScanner

a. ವಾಹನ ನಿಲುಗಡೆ ಪ್ರದೇಶ ಮತ್ತು ಚಿತ್ರಮಂದಿರದ ಹೊರ ಪ್ರದೇಶಗಳಲ್ಲಿ ದೈಹಿಕ ಅಂತರದ ಸೂತ್ರಗಳನ್ನು ಕಡ್ಡಾಯವಾಗಿ ಪಾಲಿಸುವ ಮೂಲಕ ಜನಸಂದಣಿಯಾಗದಂತೆ ಖಾತ್ರಿ ಪಡಿಸಿಕೊಳ್ಳಬೇಕು.

b. ಎಲಿವೇಟರುಗಳಲ್ಲಿ ದೈಹಿಕ ಅಂತರವನ್ನು ಕಾಪಾಡಿಕೊಳ್ಳಲು ಲಿಫ್ಟ್ ಬಳಸುವವರ ಸಂಖ್ಯೆಯನ್ನು ಮಿತಿಗೊಳಿಸತಕ್ಕದ್ದು.

c. ಚಿತ್ರ ಮಂದಿರಗಳ ಪ್ರಾರಾಂಗಣಗಳಲ್ಲಿ, ಲಾಬಿಗಳಲ್ಲಿ, ಶೌಚಾಲಯಗಳಲ್ಲಿ ಮಧ್ಯಂತರದ ಅವಧಿಯಲ್ಲಿ ಜನದಟ್ಟಣೆಯನ್ನು ತಡೆಗಟ್ಟಲು ಪ್ರಾಮಾಣಿಕ ಪ್ರಯತ್ನ ಮಾಡತಕ್ಕದ್ದು ಮಧ್ಯಂತರದ ಅವಧಿಯಲ್ಲಿ ಪ್ರೇಕ್ಷಕರ ಚಲನವಲನಗಳನ್ನು ಸಾಧ್ಯವಾದ ಮಟ್ಟಿಗೆ ನಿರ್ಬಂಧಿಸತಕ್ಕದ್ದು. ವಿವಿಧ ಸಾಲುಗಳಲ್ಲಿ ಕುಳಿತಿರುವಂತಹ ಪ್ರೇಕ್ಷಕರು ಹೆಚ್ಚಿನ ದಟ್ಟಣೆಯಾಗದ ವಿಧಾನದಲ್ಲಿ ಸಂಚರಿಸಲು ಅನುವಾಗುವಂತೆ ಮಧ್ಯಂತರ ಅವಧಿಯನ್ನು ವಿಸ್ತರಿಸತಕ್ಕದ್ದು.

### 3.5 ಪ್ರದರ್ಶನ ಸಮಯದಲ್ಲಿನ ಅಂತರ ಕಾಪಾಡುವುದು

a. ಮಲ್ಟಿಪ್ಲೆಕ್ಸುಗಳಲ್ಲಿ ಜನದಟ್ಟಣೆ ತಡೆಯಲು ಬೇರೆ ಬೇರೆ ಸ್ಕ್ರೀನ್‌ಗಳಲ್ಲಿನ ಪ್ರದರ್ಶನದ ಸಮಯ ಬೇರೆ ಬೇರೆ ಅವಧಿಯಲ್ಲಿ ಇರತಕ್ಕದ್ದು.

b. ಹಾಗೆಯೇ, ಬೇರೆ ಬೇರೆ ಸ್ಕ್ರೀನ್‌ಗಳಲ್ಲಿ ಚಿತ್ರ ಪ್ರದರ್ಶನದ ಪ್ರಾರಂಭ, ಮಧ್ಯಂತರ ಮತ್ತು ಮುಕ್ತಾಯದ ಸಮಯ ಬೇರೆ ಬೇರೆಯಾಗಿರಬೇಕು. ಒಂದು ಪರದೆಯಲ್ಲಿನ ಪ್ರದರ್ಶನದ ಪ್ರಾರಂಭದ ಸಮಯ, ಮಧ್ಯಂತರದ ಸಮಯ ಮತ್ತು ಮುಕ್ತಾಯದ ಅವಧಿ ಮಲ್ಟಿಪ್ಲೆಕ್ಸ್‌ನಲ್ಲಿರುವ ಯಾವುದೇ ಸ್ಕ್ರೀನ್‌ನಲ್ಲಿನ ಸಮಯದೊಂದಿಗೆ ಹೊಂದಾಣಿಕೆಯಾಗಬಾರದು.

### 3.6 ಬುಕ್ಕಿಂಗ್ ಮತ್ತು ಪಾವತಿ

a. ಟಿಕೆಟುಗಳ ವಿತರಣೆ / ಪರಿಶೀಲನೆ ಮತ್ತು ಹಣಪಾವತಿ, ಆಹಾರ ಮತ್ತು ಪಾನೀಯ ಇತ್ಯಾದಿಗಳ ಖರೀದಿಗೆ ಸಂಬಂಧಿಸಿದಂತೆ ಡಿಜಿಟಲ್ ಪೇಮೆಂಟ್ ಮಾದರಿಯಾದ ಆನ್‌ಲೈನ್, ಇ-ವ್ಯಾಲೆಟ್, ಕ್ಯುಆರ್ ಕೋಡ್ ಸ್ಕ್ಯಾನರ್‌ಗಳಂಥ ಸಂಪರ್ಕರಹಿತವಾದ ವಹಿವಾಟಿಗೆ ಆದ್ಯತೆ ನೀಡತಕ್ಕದ್ದು.

b. ಟಿಕೆಟುಗಳ ಖರೀದಿಯ ಸಂದರ್ಭದಲ್ಲಿ ಪ್ರೇಕ್ಷಕರ ಸಂಪರ್ಕದ ಪತ್ತೆಗಾಗಿ ಅವರುಗಳ ಸಂಪರ್ಕ ಸಂಖ್ಯೆಯನ್ನು ಪಡೆಯತಕ್ಕದ್ದು.

c. ಟಿಕೆಟು ಖರೀದಿಗಾಗಿ ಕೌಂಟರನ್ನು ದಿನವಿಡೀ ತೆರೆದಿರತಕ್ಕದ್ದು ಮತ್ತು ಟಿಕೇಟು ಮಾರಾಟದ ಕೌಂಟರುಗಳಲ್ಲಿ ಜನದಟ್ಟಣೆಯನ್ನು ತಡೆಗಟ್ಟುವ ಸಲುವಾಗಿ ಮುಂಗಡ ಬುಕ್ಕಿಂಗ್‌ಗೆ ಅವಕಾಶ ಕಲ್ಪಿಸತಕ್ಕದ್ದು.

d. ಟಿಕೆಟುಗಳನ್ನು ಕೌಂಟರಿನಲ್ಲಿ ಖರೀದಿಸುವ ಸಂದರ್ಭದಲ್ಲಿ ಜನದಟ್ಟಣೆಯನ್ನು ತಡೆಗಟ್ಟಲು ಮತ್ತು ದೈಹಿಕ ಅಂತರವನ್ನು ಕಾಪಾಡಿಕೊಳ್ಳಲು ಚಿತ್ರ ಮಂದಿರದಲ್ಲಿ ಸಾಕಷ್ಟು ಸಂಖ್ಯೆಯ ಕೌಂಟರುಗಳನ್ನು ಸ್ಥಾಪಿಸತಕ್ಕದ್ದು

e. ಟಿಕೇಟ್ ಕೌಂಟರ್ / ಬಾಕ್ಸ್ ಆಫೀಸ್ ಮುಂದೆ ಸರತಿಯ ಸಾಲಿನಲ್ಲಿ ದೈಹಿಕ ಅಂತರದ ನಿರ್ವಹಣೆಗಾಗಿ ಅಂತರದ ಸ್ಥಳಗಳನ್ನು ಗುರುತು ಮಾಡತಕ್ಕದ್ದು.

### 3.7 ಚಲನಚಿತ್ರ ಮಂದಿರದ ಆವರಣದ ಸ್ಯಾನಿಟೈಸೇಷನ್

a. ಚಲನಚಿತ್ರ ಮಂದಿರದ ಸಂಪೂರ್ಣ ಆವರಣ, ಸಾಮಾನ್ಯ ಸೌಲಭ್ಯಗಳ ಆವರಣ ಮತ್ತು ಮಾನವ ಸಂಪರ್ಕಕ್ಕೆ ಬರುವಂತಹ ಎಲ್ಲಾ ಸ್ಥಳಗಳು ಉದಾ" ಕೈಹಿಡಿಕೆಗಳು, ರೇಲಿಂಗ್‌ನಂತಹ ಸಾಧನಗಳನ್ನು ನಿಯಮಿತವಾಗಿ ಸ್ಯಾನಿಟೈಸ್ / ಸೋಂಕುನಿವಾರಕದಿಂದ ಸ್ವಚ್ಛಗೊಳಿಸತಕ್ಕದ್ದು.

b. ಪ್ರತಿ ಪ್ರದರ್ಶನದ ಬಳಿಕ ಚಲನಚಿತ್ರ ಮಂದಿರಗಳು/ ಮಲ್ಟಿಪ್ಲೆಕ್ಸುಗಳ ಪ್ರದರ್ಶನದ ಆವರಣವನ್ನು ಸ್ಯಾನಿಟೈಸ್ / ಸೋಂಕು ನಿವಾರಕದಿಂದ ಸ್ವಚ್ಛಗೊಳಿಸತಕ್ಕದ್ದು.

c. ಚಲನಚಿತ್ರ ಮಂದಿರದಲ್ಲಿ, ಆಹಾರ ಮತ್ತು ಪಾನೀಯ ಸರಬರಾಜು ಸ್ಥಳಗಳು, ಸಿಬ್ಬಂದಿ ಮತ್ತು ನೌಕರರ ಲಾಕರ್‌ಗಳು, ಶೌಚಾಲಯಗಳು, ಸಾರ್ವಜನಿಕ ಪ್ರದೇಶಗಳು ಮತ್ತು ಬ್ಯಾಕ್ ಆಫೀಸ್ ಪ್ರದೇಶಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸುವಿಕೆ ಮತ್ತು ಸೋಂಕು ತಡೆಯನ್ನು ಖಾತ್ರಿ ಪಡಿಸತಕ್ಕದ್ದು.

Scanned with CamScanner

d. ನಿರ್ಮಲೀಕರಣಗೊಳಿಸುವ ಸಿಬ್ಬಂದಿಯ ಸುರಕ್ಷತೆ ಕುರಿತಂತೆ ಕೈಗವಸುಗಳು, ಬೂಟುಗಳು, ಮಾಸ್ಕುಗಳು, ಪಿಪಿಇ ಕಿಟ್ಟುಗಳು ಇತ್ಯಾದಿಗಳನ್ನು ಸಾಕಷ್ಟು ಪ್ರಮಾಣದಲ್ಲಿ ಸರಬರಾಜು ಮಾಡತಕ್ಕದ್ದು.

e. ಯಾರೇ ವ್ಯಕ್ತಿಯು ಸೋಂಕಿಗೊಳಗಾಗಿರುವುದು ಕಂಡು ಬಂದಲ್ಲಿ ಸಂಪೂರ್ಣ ಆವರಣವನ್ನು ಸೋಂಕುರಹಿತವನ್ನಾಗಿಸಲು ಸೂಕ್ತ ಕ್ರಮ ವಹಿಸತಕ್ಕದ್ದು.

### 3.8 ಸಿಬ್ಬಂದಿ ಸಂಬಂಧಿತ ಕ್ರಮಗಳು

a. ಸಿಬ್ಬಂದಿ ವರ್ಗದವರು ಕೆಲಸ ನಿರ್ವಹಿಸುವ ಎಲ್ಲಾ ಸ್ಥಳಗಳಲ್ಲಿಯೂ ಮುಖಗವುಸು (ಮಾಸ್ಕ್) ಧರಿಸುವುದು ಕಡ್ಡಾಯವಾಗಿರತಕ್ಕದ್ದು ಮತ್ತು ಸಿಬ್ಬಂದಿವರ್ಗದವರಿಗೆ ಮುಖಗವುಸುಗಳನ್ನು ಸಾಕಷ್ಟು ಸಂಖ್ಯೆಯಲ್ಲಿ ಪೂರೈಸತಕ್ಕದ್ದು.

b. ಸೋಂಕು ಹರಡುವ ಸಾಧ್ಯತೆ ಅಧಿಕವಾಗಿರುವ ವಯೋವೃದ್ಧರು, ಗರ್ಭಿಣಿಯರು, ವೈದ್ಯಕೀಯ ಚಿಕಿತ್ಸೆ ಪಡೆಯುತ್ತಿರುವ ಸಿಬ್ಬಂದಿಗಳ ಬಗ್ಗೆ ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳತಕ್ಕದ್ದು ಮತ್ತು ಅಂತಹ ವ್ಯಕ್ತಿಗಳು ಸಾರ್ವಜನಿಕರೊಂದಿಗೆ ನೇರ ಸಂಪರ್ಕ ಹೊಂದುವಂತಹ ಕರ್ತವ್ಯಗಳನ್ನು ನಿರ್ವಹಿಸಲು ನಿಯೋಜಿಸಬಾರದು.

c. ಕಾರ್ಯ ಸ್ಥಳಗಳಲ್ಲಿ ಅಧಿಕ ಸುರಕ್ಷತೆಯನ್ನು ಖಾತ್ರಿ ಪಡಿಸುವ ದೃಷ್ಟಿಯಿಂದ, ಎಲ್ಲಾ ಸಿಬ್ಬಂದಿವರ್ಗದವರ ಮೊಬೈಲ್‌ನಲ್ಲಿ ಆರೋಗ್ಯ ಸೇತು ಆಪ್‌ಅನ್ನು ಇನ್‌ಸ್ಟಾಲ್ ಮಾಡಿರುವುದನ್ನು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

d. ಕೋವಿಡ್–19ರ ಬಗ್ಗೆ ಎಚ್ಚರಿಕಾ ಕ್ರಮಗಳಿಗೆ ಸಂಬಂಧಿಸಿದಂತೆ ಎಲ್ಲಾ ಸಿಬ್ಬಂದಿಗಳಿಗೂ, ಕಣ್ಣು, ಮೂಗು, ಬಾಯಿ ನೈರ್ಮಲ್ಯ, ಕೈಗಳ ಸ್ವಚ್ಛತೆ ಇತ್ಯಾದಿ ಕುರಿತಂತೆ ಅರಿವು ಮೂಡಿಸುವುದು ಮತ್ತು ತರಬೇತಿ ನೀಡತಕ್ಕದ್ದು.

e. ಎಲ್ಲಾ ಸಿಬ್ಬಂದಿ ವರ್ಗದವರಿಗೂ ಸಹ ತಮ್ಮ ಆರೋಗ್ಯ ಕುರಿತಂತೆ ಸ್ವಯಂ ಮುನ್ನೆಚ್ಚರಿಕೆ ಕ್ರಮಗಳನ್ನು ವಹಿಸುವುದು ಮತ್ತು ಯಾವುದೇ ರೀತಿಯಲ್ಲಿಯಾದರೂ ಅನಾರೋಗ್ಯ ಪೀಡಿತರಾದಲ್ಲಿ ತಕ್ಷಣವೇ ಆ ಬಗ್ಗೆ ಆಪ್ತಮಿತ್ರ ಸಹಾಯವಾಣಿ 14410 ಅನ್ನು ಸಂಪರ್ಕಿಸುವಂತೆ ಸಲಹೆ ಮಾಡಬೇಕು.

### 3.9 ಸಾರ್ವಜನಿಕರಿಗೆ ಅರಿವು

a. ಅತ್ಯಂತ ಪ್ರಮುಖವಾದ ಸಂಪರ್ಕ ಸ್ಥಳಗಳಲ್ಲಿ ಎಂದರೆ ಆನ್ ಲೈನ್ ಮಾರಾಟ ಸ್ಥಳಗಳು, ಡಿಜಿಟಲ್ ಟಿಕೆಟು ವಿತರಣಾ ಸ್ಥಳಗಳು ಸಾರ್ವಜನಿಕ ಸ್ಥಳಗಳಾದ ಪ್ರಾಂಗಣಗಳು, ಶೌಚಾಲಯಗಳು, ಇತ್ಯಾದಿ ಸ್ಥಳಗಳಲ್ಲಿ ಮುನ್ನೆಚ್ಚರಿಕೆ ಕುರಿತಂತೆ ತಿಳಿಸತಕ್ಕದ್ದು.

b. ಮುಖಗವುಸುಗಳನ್ನು ಧರಿಸುವುದು, ದೈಹಿಕ ಅಂತರವನ್ನು ಕಾಪಾಡಿಕೊಳ್ಳುವುದು ಮತ್ತು ಕೈಗಳ ಸ್ವಚ್ಛತೆ ಕುರಿತಂತೆ ಧ್ವನಿವರ್ಧಕಗಳ ಮೂಲಕ ಘೋಷಣೆ ಮಾಡುವುದು ಮತ್ತು ಆವರಣದ ಒಳಗೆ ಮತ್ತು ಹೊರಗೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತಂತೆ ಚಲನಚಿತ್ರ ಪ್ರದರ್ಶನಕ್ಕೂ ಮುನ್ನ ಮತ್ತು ಮಧ್ಯಂತರ ಅವಧಿಯಲ್ಲಿ ಮತ್ತು ಚಿತ್ರ ಪ್ರದರ್ಶನ ಮುಕ್ತಾಯವಾದ ನಂತರ ಕಡ್ಡಾಯವಾಗಿ ಪ್ರದರ್ಶಿಸತಕ್ಕದ್ದು.

c. ಸ್ಥಳದ ಹೊರಭಾಗದಲ್ಲಿ ಮತ್ತು ಒಳಭಾಗದಲ್ಲಿ ಕೋವಿಡ್–19 ಕುರಿತಂತೆ ಪೋಸ್ಟರ್ / ಸ್ಟ್ಯಾಂಡೀಸ್ / ದೃಶ್ಯ – ಶ್ರವ್ಯ ಮಾಧ್ಯಮಗಳ ಮೂಲಕ ಪ್ರದರ್ಶಿಸುವ ವ್ಯವಸ್ಥೆ ಇರತಕ್ಕದ್ದು.

### 3.10 ಹವಾನಿಯಂತ್ರಣ/ತಾಪಮಾನ

ಹವಾ ನಿಯಂತ್ರಣ ವ್ಯವಸ್ಥೆ ಮತ್ತು ಬೆಳಕಿನ ವ್ಯವಸ್ಥೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಮಾರ್ಗಸೂಚಿಗಳನ್ನು ಅನುಸರಿಸತಕ್ಕದ್ದು ಮತ್ತು ಅವು ಕೆಳಕಂಡ ಅಂಶಗಳನ್ನು ಒತ್ತಿ ಹೇಳುತ್ತವೆ.

a. ಹವಾನಿಯಂತ್ರಣ ಸಾಧನಗಳ ತಾಪಮಾನವನ್ನು 24 ರಿಂದ $30^0$ಯವರೆಗೆ ನಿಗದಿ ಪಡಿಸತಕ್ಕದ್ದು.

b. ತತ್ಸಂಬಂಧವಾದ ತೇವಾಂಶವು ಶೇ. 40–70 ರಷ್ಟಿರತಕ್ಕದ್ದು.

c. ಸಾಧ್ಯವಾದಷ್ಟು ಮಟ್ಟಿಗೆ ಗಾಳಿಯು ಮರಳಿ ಮರಳಿ ಒಳಗೆ ಸುತ್ತುವುದನ್ನು ನಿರ್ಬಂಧಿಸತಕ್ಕದ್ದು.

d. ಸಾಧ್ಯವಾದಷ್ಟು ಮಟ್ಟಿಗೆ ಶುದ್ಧ ಗಾಳಿಯಾಡುವಂತೆ ವ್ಯವಸ್ಥೆ ಇರತಕ್ಕದ್ದು.

Scanned with CamScanner

e. ಗಾಳಿಯು ವೆಂಟಿಲೇಷನ್ ಮೂಲಕ ಹೊರಹೋಗುವ ವ್ಯವಸ್ಥೆ ಇರತಕ್ಕದ್ದು.

**3.11 ಅಶಿಸ್ತಿನ ನಡವಳಿಕೆ ಹತ್ತಿಕ್ಕುವುದು**

ಕೋವಿಡ್-19ಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರತಿರೋಧ / ಅಸಹಕಾರ ಅಥವಾ ಅಶಿಸ್ತಿನ ನಡವಳಿಕೆಯನ್ನು ಚಿತ್ರಮಂದಿರದ ವ್ಯವಸ್ಥಾಪಕರು ಮತ್ತು ಸ್ಥಳೀಯ ಆಡಳಿತದ ಸಹಯೋಗದೊಂದಿಗೆ ಬಹಳ ಕಟ್ಟುನಿಟ್ಟಾಗಿ ತಡೆಗಟ್ಟಲು ಪ್ರಯತ್ನಿಸುವುದು.

**3.12 ಆಹಾರ ಮತ್ತು ಪಾನೀಯ ಸರಬರಾಜು ಪ್ರದೇಶ**

a. ಚಲನಚಿತ್ರ ಮಂದಿರಗಳಲ್ಲಿ ಪ್ರದರ್ಶನ ಸಮಯವನ್ನು ಯಾವ ರೀತಿಯಲ್ಲಿ ವ್ಯವಸ್ಥೆ ಮಾಡತಕ್ಕದ್ದೆಂದರೆ ವಿವಿಧ ಪ್ರದರ್ಶನಗಳು ಒಂದೇ ಸಮಯದಲ್ಲಿ ಪ್ರಾರಂಭಗೊಳ್ಳತಕ್ಕದ್ದಲ್ಲ.

b. ಆಹಾರಗಳನ್ನು ಗ್ರಾಹಕರು ಸಾಧ್ಯವಾದ ಮಟ್ಟಿಗೆ ಸಿನಿಮಾ ಆಪ್ / ಕ್ಯುಆರ್ ಕೋಡ್, ಇತ್ಯಾದಿಗಳನ್ನು ಬಳಕೆ ಮಾಡುವ ಮೂಲಕ ಪಡೆಯತಕ್ಕದ್ದು.

c. ಸಾಧ್ಯವಿರುವ ಕಡೆಯಲ್ಲಿ ಹೆಚ್ಚಿನ ಸಂಖ್ಯೆಯ ಆಹಾರ ಮತ್ತು ಪಾನೀಯ ಕೌಂಟರ್‌ಗಳನ್ನು ತೆರೆಯತಕ್ಕದ್ದು.

d. ಪ್ರತಿ ಕೌಂಟರಿನಲ್ಲಿಯೂ ದೈಹಿಕ ಅಂತರ ಕಾಯ್ದುಕೊಳ್ಳುವಂಥ ಗುರುತುಗಳಿರುವ ಒಂದೇ ಸರತಿ ಸಾಲು ಇರತಕ್ಕದ್ದು.

e. ಕೇವಲ ಪ್ಯಾಕ್ ಮಾಡಿದ (ಪ್ಯಾಕ್ಡ್ ಫುಡ್) ಆಹಾರ ಮತ್ತು ಪಾನೀಯಗಳಿಗೆ ಅವಕಾಶ ನೀಡತಕ್ಕದ್ದು.

f. ಚಲನಚಿತ್ರ ಮಂದಿರ / ಹಾಲ್ / ಆಡಿಟೋರಿಯಂ ಒಳಗಡೆ ಆಹಾರ ಮತ್ತು ಪಾನೀಯ ಸರಬರಾಜನ್ನು ನಿಷೇಧಿಸತಕ್ಕದ್ದು.

g. ಪ್ರತಿಯೊಂದು ಆಹಾರ ಮತ್ತು ಪಾನೀಯ ಪೂರೈಸುವ ಸ್ಥಳಗಳಲ್ಲಿ ದೈಹಿಕ ಅಂತರ ಕಾಪಾಡುವುದು ಮತ್ತು ಜನದಟ್ಟಣೆ ಆಗದಂತೆ ಮ್ಯಾನೇಜ್‌ಮೆಂಟ್‌ನವರೇ (ವ್ಯವಸ್ಥಾಪಕರು) ನೋಡಿಕೊಳ್ಳತಕ್ಕದ್ದು.

h. ಆಹಾರ ಮತ್ತು ಪಾನೀಯಗಳ ತ್ಯಾಜ್ಯದ ಸುರಕ್ಷಿತ ವಿಲೇವಾರಿಯನ್ನು ಆಯಾ ಆಯಾ ಜಾಗದಲ್ಲಿರುವ ನಿರ್ವಾಹಕರು ಖಾತ್ರಿ ಪಡಿಸಿಕೊಳ್ಳತಕ್ಕದ್ದು.

**4.** ಈ ಎಲ್ಲಾ ಕಾರ್ಯಚಟುವಟಿಕೆಗಳನ್ನು ನಡೆಸುವ ಸಂದರ್ಭದಲ್ಲಿ ಕೋವಿಡ್-19ರ ನಿರ್ವಹಣೆ ಕುರಿತಂತೆ ಗೃಹ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಮತ್ತು ಸಬಂಧಿತ ಇಲಾಖೆಗಳು ಮತ್ತು ಸ್ಥಳೀಯ ಆಡಳಿತಗಳ ತತ್ಸಂಬಂಧವಾಗಿ ಹೊರಡಿಸಿರುವ ನಿರ್ದೇಶನ ಮತ್ತು ಇನ್ನಿತರ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಕ್ಕದ್ದು.


ಜಯಶ್ರೀ.ಎಸ್.ಎನ್.

(ಜಯಶ್ರೀ.ಎಸ್.ಎನ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ. ಸಂಸ್ಕೃತಿ ಮತ್ತು ವಾರ್ತಾ ಇಲಾಖೆ
(ವಾರ್ತಾ ಶಾಖೆ)

Scanned with CamScanner

ಅಡಕ – 1

## ಚಲನಚಿತ್ರ ಮಂದಿರಗಳ ಆಸನ ವ್ಯವಸ್ಥೆಯ ಮಾದರಿ



Scanned with CamScanner

## ಸರ್ಕಾರದ ಆದೇಶ ಸಂಖ್ಯೆ: KCI-PIF/27/2020, ದಿ:14.10.2020

ಅನುಬಂಧ – 2

SOPs for Exhibition of Films on preventive measures to contain spread of COVID-19

## 1. Background

In the alert of COVID-19 outbreak in India, it is important that various stakeholders who are involved in the activities of exhibition of films must take suitable measures to restrict the transmission of the virus while conducting their operations and activities.

The Ministry of Home Affairs, Government of India has permitted the opening of cinemas/theatres/multiplexes from 15th of October 2020. In this regard Information and Broadcasting Ministry, Government of India has issued the SOP.

Government of Karnataka in its Letter No. KME/158/TNR/2020 dated: 1-10-2020 has stated that the Cinema Halls/Theaters/Multiplexes across the state will be permitted to open from 15th October 2020. and the Department of Information and Public Relations will issue a suitable SOP.

In this background, the Department of Information and Public Relations has issued the SOP for the operations and activities of Cinemas/Theaters/Multiplexes in state

## 2. Scope

2.1 This document outlines the Standard Operating Procedures (SOPs) in terms of various generic precautionary measures to be adopted in addition to specific measures to be ensured during exhibition of films to prevent spread of COVID-19.

2.2 No Exhibition of Film shall be allowed in containment zones.

2.3 Film exhibition activities through cinemas/theatres/multiplexes shall be governed as per the prevalent guidelines of Home Department, Health & Family Welfare department, Department of information and public relations and other related departments and District administrations.

## 3. SOPs related to Exhibition of films

### 3.1 General Guidelines



Scanned with CamScanner

The generic measures include public health measures that are to be followed to reduce the risk of transmission of COVID-19. These measures need to be observed by all (workers and visitors) at all times.

These include:

i. Adequate physical distancing of at least 6 feet to be followed outside the auditoriums, common areas and waiting areas at all times.

ii. Use of face covers/masks to be made mandatory at all times.

iii. Availability of hand sanitizers, preferably in the touch-free mode, at entry and exit points as well as common areas within the premises.

iv. Respiratory etiquettes to be strictly followed. This involves strict practice of covering one's mouth and nose while coughing/sneezing with a tissue/handkerchief/flexed elbow and disposing off used tissues properly.

v. Self-monitoring of health by all and reporting any illness at the earliest to state and district helpline.

vi. Spitting shall be strictly prohibited.

vii. Installation & use of *Aarogya Setu* App shall be advised to all.

### 3.2 Entry & Exit Points

a. Thermal screening of visitors/staff is to be carried out at entry points. Only asymptomatic individuals shall be allowed to enter the premises.

b. Provisions for hand sanitization should be made available at all entry points and in work areas.

c. Designated queue markers shall be made available for entry and exit of the audience from the auditorium and the premises.

d. The Exit should be done in a staggered row-wise manner to avoid crowding.

e. Sufficient time interval between successive screenings on a single screen as well as on various screens in a multiplex shall be provided to ensure row-wise staggered entry and exit of the audience.

### 3.3 Seating Arrangements

a. The occupancy of the cinemas/theatres/multiplexes shall not be more than 50% of their total seating capacity.

b. Seating arrangement inside the auditorium of the cinemas/theatres/multiplexes to be made in such a way that adequate physical distancing is maintained. A model seating arrangement is attached at Annexure 1.

c. Seats that are "Not to be occupied" shall be marked as such during booking (for both online booking and at the box office sale of tickets).



Scanned with CamScanner

Note: The "Not to be occupied "seats inside cinemas/theatres/multiplexes should either be taped or marked with fluorescent markers to prevent people from occupying these seats so as to ensure adequate physical distancing at all times.

### 3.4 Physical Distancing Norms

a. Proper crowd management in the parking lots and outside the premises—duly following physical distancing norms shall be ensured.

b. Number of people in the elevators shall be restricted, duly maintaining physical distancing norms.

c. Efforts shall be made to avoid overcrowding in the common areas, lobbies and washrooms during the intermission. Audience may be encouraged to avoid movement during the intermission. Longer intermissions may be used to allow audience seated in different rows of the auditorium to move in a staggered manner.

### 3.5 Staggered Show Timings at Multiplexes

a. Staggered show timings shall be followed for multiple screens to avoid crowding.

b. the show commencement time, intermission period and finish time of a show at any screen shall not overlap with the commencement time, intermission period or finish time of as how at any other screen in a multiplex.

### 3.6 Booking and Payments

a. Digital no-contact transactions should be the most preferred mode for issue/verification/payments for tickets, food, and beverages, etc. by using online bookings, use of e-wallets, QR code scanners, etc.

b. Contact number shall be taken at the time of booking of tickets to facilitate contact tracing.

c. The purchase of tickets at the box office shall be open throughout the day and advance booking shall be allowed to avoid crowding at the sale counters.

d. Sufficient number of counters at the box office shall be opened with adequate physical distancing norms, to prevent crowding during physical booking of tickets.

e. Floor markers shall be used for physical distancing during queue management at the box office.

### 3.7 Sanitization of the Premises

a. Frequent sanitization of the entire premises, common facilities, and all points which come into human contact, e.g. handles, railings, etc. shall be ensured.



Scanned with CamScanner

b. The cinemas/theatres/multiplexes auditorium shall be sanitized after every screening.

c. Regular cleaning and disinfection of the box office, food and beverage areas, employee and staff lockers, toilets, public areas, and back office areas shall be ensured.

d. Measures for the safety of sanitization staff such as adequate provisions for rational use of gloves, boots, masks, PPE, etc. shall be undertaken.

e. Disinfection of the premises to be taken up if any person is found positive.

### 3.8 Staff Related Measures

a. Wearing of face cover for staff is mandatory at all workplaces and adequate stock of such face covers should be made available.

b. All employees who are at higher risk, i.e., older employees, pregnant employees, employees who have underlying medical conditions, to take extra precautions. They should preferably not be exposed to any front-line work requiring direct contact with the public.

c. With a view to ensure safety at the workplace, employers on best effort basis should ensure that Arogya Setu is installed and updated by all employees their mobile phones.

d. Communication and training of the staff on precautions related to COVID-19, respiratory hygiene, hand hygiene, etc. shall be carried out.

e. Self-monitoring of health by all employees/staff and reporting any illness at the earliest shall be ensured.

### 3.9 Public Awareness

a. Do's and Don'ts shall be communicated at prominent access points: Online sale points, digital tickets, public areas like lobbies, washrooms, etc.

b. Public Service Announcements on wearing mask, observing physical distancing and maintaining hand hygiene as well as specific announcements on the precautions and measures to be followed within and outside the premises shall be made before the screening, during intermission and at the end of the screening.

c. Provisions must be made for display of Posters/standees/AV media on preventive measures about COVID-19 prominently outside and inside of the venues.



Scanned with CamScanner

### 3.10 Air-Conditioning/Cooling

For air-conditioning/ventilation, the guidelines of CPWD shall be followed which, inter alia, emphasizes the following:

a. Temperature Setting of all air conditioning devices should be in the range of 24-30°C.

b. Relative humidity should be in the range of 40-70%.

c. Re-circulation of air to be avoided to the extent possible.

d. Intake of fresh air should be as much as possible.

e. Cross ventilation should be adequate.

### 3.11 Anti-stigma Behavior

COVID-19 related stigmatization or unruly behavior shall be dealt with strictly by coordination between the auditorium manager(s) and the local authorities.

### 3.12 Food and Beverage Area

a. Show timings in the cinema halls to be staggered to ensure that intervals of different shows do not occur simultaneously.

b. Customers shall be encouraged to use cinema apps/QR codes, etc. for ordering food as much as possible.

c. Multiple sale counters in food and beverage area be made available wherever possible.

d. One line systems to be followed using floor stickers to maintain physical distancing at every sale counter.

e. Only packaged food and beverages shall be allowed.

f. Delivery of food and beverage inside the hall/auditorium shall be prohibited.

g. Management shall ensure observance of physical distancing and preventing crowds in the food and beverages area.

h. Safe disposal of the food and beverage waste shall be ensured by the management of the premises.



Scanned with CamScanner

4. The National Directives for COVID-19 Management and the relevant guidelines issued by the Home Department, Health & Family Welfare department, Department of information and public relations and other related departments and District administrations, etc. shall be strictly complied with during all activities and operations.

Jayashree.S.N.

(Jayashree.S.N)

Under Secretary to Government,

Kannada, Culture and Information Department.


(Information Section)



Scanned with CamScanner

Enclosure 1

**Model Seating Arrangement for Exhibition of Films**





Scanned with CamScanner